# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ

## ದಿನಾಂಕ: 16.01.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 16.01.2021ರಂದು ವಾರ್ಡ್ ಸಂಖ್ಯೆ 129ರ ಜನವರಿ ಮಾಹೆಯ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದಸದಸ್ಯರು:–

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಪಿ.ವಿಜಯರಾಘವನ್,ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129.
3. ತಾರಾಕೇಶವ, ಮಾರ್ಷಲ್ ವಾರ್ಡ್–129
4. ಶ್ರೀ.ನಾಗೇಂದ್ರ, ಹೆಲ್ತ್ ಬಡಾವಣೆ.
5. ಎಲ್.ರಂಗರಾಜು
6. ಶ್ರೀ.ನಾಗೇಶ್
7. ಶ್ರೀಮತಿ ಶೋಭಾ ಶಿವಾನಂದ್.
8. ಶ್ರೀಮತಿ.ಮಂಜುಳ ಆರ್.
9. ಶ್ರೀ.ಭರತ್ ವಿ
10. ಶ್ರೀ.ನರಸಿಂಹ ಮೂರ್ತಿ ಎನ್
11. ಶ್ರೀ.ಈಶ್ವರ ರೆಡ್ಡಿ ಎನ್
12. ಶ್ರೀ.ರಂಗಸ್ವಾಮಯ್ಯ ಸಿ.ಕೆ.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಸ್ವಚ್ಛ ಗೃಹ ಕಲಿಕಾ ಕೇಂದ್ರ ಕಾಂಪೋಸ್ಟ್ ತರಬೇತಿ ಕೇಂದ್ರಕ್ಕೆ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ), ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಹಾಗೂ ನಿವಾಸಿಗಳು ಮುಂದಿನ ವಾರದಲ್ಲಿ ದಿನಾಂಕ ನಿಗಧಿಪಡಿಸಿ ಹೆಚ್.ಎಸ್.ಆರ್ ಲೇಔಟ್ ನ ಸ್ವಚ್ಛ ಗೃಹ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ-129ರ ವ್ಯಾಪ್ತಿಯಲ್ಲಿ ಸ್ಥಳ ಲಭ್ಯವಿರುವ ಕಡೆ ಕಾಂಪೋಸ್ಟ್ ಕೇಂದ್ರವನ್ನು ಪ್ರಾರಂಭಿಸಲು ಸಹಕರಿಸೋಣವೆಂದು ಚರ್ಚಿಸಲಾಯಿತು.
- ಶ್ರೀಮತಿ ಶೋಭ ಭಟ್ ರವರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಗೆ ನಿಷೇಧವಿದ್ದರೂ ಹಲವು ವಾಣಿಜ್ಯ ಮಳಿಗೆಗಳಲ್ಲಿ ಉಪಯೋಗಿಸುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಕ್ರಮ ವಹಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- ಹಸಿ ತ್ಯಾಜ್ಯ-ಒಣ ತ್ಯಾಜ್ಯ ವಿಂಗಡಣೆ, ಬ್ಲಾಕ್ ಸ್ಪಾಟ್, ಸ್ಟ್ರೀಟ್ ಸ್ವೀಪಿಂಗ್ ವಿಷಯವಾಗಿ ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದು ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಸಾರ್ವಜನಿಕರು ದೂರು ನೀಡಿದರು.
- ಹೆಲ್ತ್ ಬಡಾವಣೆಯ ನಿವಾಸಿಯಾದ ಸೋನಿ ಶರ್ಮಾರವರು ತಮ್ಮ ಮನೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ಕಸದ ಗಾಡಿಯು ಸರಿಯಾಗಿ ಬರುತ್ತಿಲ್ಲವೆಂದು ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ತಿಳಿಸಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಕೋರಿದರು.
- ಅನ್ನಪೂರ್ಣೇಶ್ವರಿ ನಗರ ನಿವಾಸಯಾದ ಶ್ರೀ ಹಿರೇಮಠ್ ರವರು ಹಸಿ ಕಸ ಮತ್ತು ಒಣಕಸ ಪ್ರತ್ಯೇಕವಾಗಿ ಸಂಗ್ರಹಿಸುವ ಕಾರ್ಯವು ಸರಿಯಾಗಿ ಆಗುತ್ತಿಲ್ಲವೆಂದು ದೂರು ನೀಡಿ ಸಂಬಂಧಿಸಿದ ಗುತ್ತಿಗೆದಾರರಿಗೆ ಕಸ ಸಂಗ್ರಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.
- ಕ್ರಮ :- ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-129/ ಸಹಾಯಕ ಕಾರ್ಯಪಾಲಕ ಅಭಿಯಂತರರು ರಾರಾನಗರ (ಘ.ತ್ಯಾ.ನಿ)

## ❖ ಕಾಮಗಾರಿ ಸಂಬಂಧಿಸಿದ ವಿಷಯಗಳು

- ಹೆಲ್ತ್ ಬಡಾವಣೆಯ ನಿವಾಸಿಯಾದ ಸೋನಿ ಶರ್ಮಾ ಹಾಗೂ ರಮೇಶ್ ರವರು ತಮ್ಮ ಮನೆಯ ಸುತ್ತಮುತ್ತಲ ರಸ್ತೆ ಬದಿಯ ಚರಂಡಿಗಳಲ್ಲಿ ಹೂಳು ತುಂಬಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದೆ ತಮ್ಮ ಮನೆಗೆ ನೀರು ನುಗ್ಗಿರುವುದಾಗಿ ದೂರು ನೀಡಿ ಹೂಳನ್ನು ತೆರವುಗೊಳಿಸುವಂತೆ ಕೋರಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಲು ಕ್ರಮ ವಹಿಸುವಂತೆ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.
- ಎಸ್.ಎಲ್.ಎನ್ ಸೆರಾಮಿಕ್ಸ್ ಹತ್ತಿರ, ಕೆಂಗುಂಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಚರಂಡಿ ಮತ್ತು ಕಲ್ವರ್ಟ್ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಅಲ್ಲಿನ ನಿವಾಸಿಗಳು ಕೋರಿದರು.
- ಎನ್.ಜಿ.ಇ.ಎಫ್ ಬಡಾವಣೆಯ ಹಲವು ಕಡೆ ಸ್ಟ್ರೀಟ್ ನೇಮ್ ಬೋರ್ಡ್ ಅಳವಡಿಸಲು ಅಲ್ಲಿನ ನಿವಾಸಿಗಳು ಕೋರಿದರು.
- ಅನ್ನಪೂರ್ಣೇಶ್ವರಿ ನಗರ, ಉಲ್ಲಾಳು ಮುಖ್ಯರಸ್ತೆ, ಪಾಪರೆಡ್ಡಿ ಪಾಳ್ಯ ಸರ್ಕಲ್, ದೀಪಾ ಕಾಂಪ್ಲೆಕ್ಸ್ ರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿದ್ದು, ಒತ್ತುವರಿ ತೆರವುಗೊಳಿಸಲು ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಸಹಾಯ ಆಪ್‌ನಲ್ಲಿ ದಾಖಲಾಗುವ ಆನ್ಲೈನ್ ದೂರುಗಳ ಬಗ್ಗೆ ಆದ್ಯತೆಯ ಮೇರೆಗೆ ತುರ್ತಾಗಿ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ :- ಸಹಾಯಕ ಅಭಿಯಂತರರು ವಾರ್ಡ್-129/ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಠಾನಗರ ಉಪವಿಭಾಗ.

ಸಹಿ/-

ಕಾರ್ಯದರ್ಶಿಗಳು ವಾರ್ಡ್ ಸಮಿತಿ

ವಾರ್ಡ್ ಸಂಖ್ಯೆ-129

Sd/-

ನೋಡಲ್ ಅಧಿಕಾರಿಗಳು

ವಾರ್ಡ್ ಸಂಖ್ಯೆ-129

***ಪ್ರತಿಯನ್ನು:***

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾಠಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾಠಾನಗರ ವಲಯ ರವರಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾಠಾನಗರ ವಿಭಾಗರವರಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.